ಮಂಡಿ ಕುಮಾರ್, ಬೆಂಗಳೂರು

ಮೋಡ ಕವಿದರೆ ಮಳೆ. ಹೆಣ್ಣು ಗುಡುಗಿದರೆ?



ಚಂಡಿಮಾರುತ.

ಜೀವಿ, ಗೊಂಡೇದಹಳ್ಳಿ

ದೇವತೆಗಳಿಗೆ ಶ್ರೀಮತಿ ಎನ್ನುವ ಬದಲು ಶ್ರೀ ಎನ್ನುವುದೇಕೆ?

ಸಿರಿ, ಪೌರುಷದಲ್ಲಿ ಶ್ರೀಗೆ ಸರಿಸಮ ಆಗಿರುವುದರಿಂದ.

ಕೆ. ಶ್ರೀನಿವಾಸ, ಬೆಂಗಳೂರು

ನಮ್ಮ ವಿಶ್ವಸಮುದಾಯ ನಿಜವಾಗಿಯೂ ನಾಗರಿಕತೆಯನ್ನು ಅಳವಡಿಸಿಕೊಂಡಿದೆಯೆ?

ನಾಗ (ವಿಷ), ಗರಿ (ಗರ್ವ)ಗಳ ಕತೆಗಳನ್ನಂತೂ ಅಳವಡಿಸಿಕೊಂಡಿದೆ.

ಸುರಭಿ ಗಣೇಶ್, ದೊಡ್ಡಬಳ್ಳಾಪುರ

ಸ್ತ್ರೀಯರಿಗೆ ತಾವು ಅಬಲೆಯರಲ್ಲ, ಸಬಲೆಯರು ಎಂದು ಯಾವಾಗ ಅರಿವಾಗುತ್ತದೆ?



ಪುರುಷರ ಬಲೆಯಿಂದ ಹೊರಬಂದು ಭಲೆ ಎನ್ನಿಸಿಕೊಂಡಾಗ.

ಅನಸೂಯ ಟಿ., ಕೇದಿಗೆಮನೆ

ಬಾಯಿಮಾತಿಗೆ ಹೇಳಿದೆ ಅನ್ನುತ್ತಾರಲ್ಲ, ಹಾಗೆಂದರೇನು?

ಪ್ರಾಮಾಣಿಕತೆಗೆ ಗುಡ್ ಬಾಯ್ (Good bye) ಎಂದು.

ಬೂಕನಕೆರೆ ವಿಜೇಂದ್ರ, ಮೈಸೂರು

ಬ್ರಹ್ಮಚಾರಿಗಳೇ ಹೆಚ್ಚು ವರ್ಷಗಳು ಬದುಕುತ್ತಾರಲ್ಲ?

ಪದೇ ಪದೇ 'ಹೊಸರುಚಿ'ಯ ಪ್ರಯೋಗಕ್ಕೆ ಒಳಗಾಗುವುದಿಲ್ಲವಲ್ಲ.

ಎನ್. ಗೋಪಾಲರಾವ್, ಬೆಂಗಳೂರು

ಶ್ರೀಕೃಷ್ಣನು ಮದುವೆಯಾದ ಹದಿನಾರು ಸಾವಿರ ಅಪ್ಸರೆಯರ ಹೆಸರುಗಳನ್ನು ತಿಳಿಸುವಿರಾ?

ವಿವಾಹದ ನಂತರದ್ದನ್ನು ತಿಳಿಸಬಲ್ಲೆ – ಎಲ್ಲರ ಹೆಸರೂ ಮಿಸೆಸ್ ಕೃಷ್ಣ!

ಎಂ.ಎ. ಕುಮಾರ್, ಬೆಂಗಳೂರು

ದೇವಪತ್ನಿಯರು ದೇವನು ಪವಡಿಸುವಾಗ ಕಾಲಬಳಿ ಕುಳಿತು ಕಾಲೊತ್ತುತ್ತಿದ್ದರು. ಈಗಿನ ಧರ್ಮಪತ್ನಿಯರು?

'ಬಿದ್ಕೊಳಿ' ಎಂದು ಆಶೀರ್ವದಿಸಿ, ತಮ್ಮ ಸ್ನೇಹಿತರ ಕಾಲ್ ಬಟನ್ ಒತ್ತುತ್ತಾರೆ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ದೀಪ ಆರುವಾಗ ಜೋರಾಗಿ ಉರಿಯುತ್ತಂತೆ. ಯಾಕೆ?

ಅದು 'ನಾ ಸತ್ರೂ ನಿನ್ನ ಕಾಟ ತಪ್ಪಲ್ಲ' ಎಂದು ಕತ್ತಲೆಯತ್ತ ಬಿಡುವ ಕಡೆಯ ನಿಟ್ಟುಸಿರು.

ಬಿ.ಆರ್. ಉಷಾ, ಬೆಂಗಳೂರು

ಬುದ್ಧನಿಗೆ ಬೋಧಿವೃಕ್ಷದ ಕೆಳಗೆ ಜ್ಞಾನೋದಯವಾಯ್ತು. ರಾಜಕಾರಣಿಗೆ?

'ಮೋದಿವೃಕ್ಷದ ಕೆಳಗೆ' ಎಂದನೊಬ್ಬ ಕಮಲಿಗ.

ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ

ರಾಜಕಾರಣಿಗಳು ಸದಾ ಸಮುದಾಯ ಸಮಾರಂಭಗಳಲ್ಲಿ ತೊಡಗಿದ್ದರೆ ರಾಜ್ಯದ ಏಳಿಗೆ ನೋಡುವುದೆಂದು?

ಹುಚ್ಚಪ್ಪ! ರಾಜ್ಯದ ಏಳ್ಗೆಗೂ ರಾಜಕಾರಣಿಗೂ ಸಂಬಂಧವಿದೆ ಎನ್ನುವುದು ದೊಡ್ಡ ಭ್ರಮೆ.

ಶ್ರುತಿ ರಿಗ್ರೆಟ್ ಐಯ್ಯರ್, ಅಮೆರಿಕ

ಗಂಡಸರ ಬ್ಯೂಟಿ ಪಾರ್ಲರ್‌ಗಳು ಇಂದು ಹೆಚ್ಚುತ್ತಿವೆ. ಏಕೆ?

ಗಂಡನ್ನು as is where is ಸ್ಥಿತಿಯಲ್ಲಿ ಹೆಣ್ಣುಗಳು ಒಪ್ಪುತ್ತಿಲ್ಲವಂತೆ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

ಶೃಂಗಾರದ ಸಲಕರಣೆಗಳೇ ಇಲ್ಲವಾದರೆ ಏನಾದೀತು?

ಒರಿಜಿನಲ್ ಶೂರ್ಪನಖಿ, ಮಾರೀಚರ ರೂಪಗಳು ಹೆಚ್ಚು ಕಾಣುವಂತಾದೀತು.

## ಬಹುಮಾನಿತ ಪ್ರಶ್ನೆ

ರಾಜೀವ್ ಎನ್. ಮಾಗಲ್, ಸಕಲೇಶಪುರ

'ಗುಜರಿ ಅಂಗಡಿಯಲ್ಲಿ ಬೆಂಕಿ ಅನಾಹುತ; ಲಕ್ಷಾಂತರ ಬೆಲೆಯ ವಸ್ತುಗಳು ದಹನ.' ಇದರ ಅರ್ಥವೇನು?

ಚಿಲ್ಲರೆ ಜನಗಳ ಕೈವಾಡ ಇದೆಯೆಂದು.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಹಣಕ್ಕೂ, ಗುಣಕ್ಕೂ ಇರುವ ವ್ಯತ್ಯಾಸವೇನು?

ಹಣದಿಂದ ಬಡ್ಡಿ; ಗುಣದಿಂದ ಬಡ್ತಿ.

ಪಿ.ಜೆ. ರಾಘವೇಂದ್ರ, ಮೈಸೂರು

ಗೂಗಲ್ಲಿಗೂ, ರಾಮ್‌ಗೂ ಏನು ವ್ಯತ್ಯಾಸ?

ಗೂಗಲ್‌ಗೆ ಕೊಂಚವೂ ಹಾಸ್ಯಪ್ರಜ್ಞೆ ಇಲ್ಲ.

ಶ್ರೀನಿವಾಸ ಕೆ.

ನನ್ನ ಶರ್ಟಿನ ಕಿಸೆಯಿಂದ ಹಣ ತೆಗೆದದ್ದನ್ನು ಪ್ರಶ್ನಿಸಿದರೆ ಸತಿಗೆ ಭಯಂಕರ ಕೋಪ ಬರುತ್ತಲ್ಲಾ?

ಸರಿಯೇ. ಜೇಬಿರುವ ಭಾಗದ ಅರ್ಧ ಅಂಗಿ ಅರ್ಧಾಂಗಿಯ ಹಕ್ಕು.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ

ಆಕಳಿಕೆ ಸಾಂಕ್ರಾಮಿಕ ಯಾಕೆ ಸರ್?



ನಿದ್ರೆ ಜಾಗತಿಕವಾದ್ದರಿಂದ.

ನಾ. ಜ್ಯೋತಿ, ಹೂವಿನಹಡಗಲಿ

ಗೌರಿಯನ್ನು ಕರೆದೊಯ್ಯಲು ಬುವಿಗೆ ಬರುವ ಗಣಪನು ಹೋಗುವಾಗ ಮಲತಾಯಿ ಗಂಗೆಯ ಬಳಿ ತೆರಳುವುದೇಕೆ?

ಗೌರಿಯು ಮರಳುವವರೆಗೆ ಗಂಗೆಯು ಶಿವನ ತೊಡೆಯನ್ನು ಆಕ್ರಮಿಸಿಕೊಳ್ಳದಂತೆ ಕಾವಲಿರಲು.

ಪಿ. ಜಯವಂತ ಪೈ, ಕುಂದಾಪುರ

ಸ್ತ್ರೀಗೂ, ಇಸ್ತ್ರೀಗೂ ವ್ಯತ್ಯಾಸವೇನು?

ಇಸ್ತ್ರೀ ಉಡುಪಿಗೆ ಚಂದ. ಸ್ತ್ರೀ ಉಡುಪಿಗೆ, ಕಾರ್ಕಳಕ್ಕೆ, ಬೆಳವಾಡಿಗೆ... ಎಲ್ಲೆಡೆಗೂ ಚಂದ.

■ ರಾಮ್